## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ | 2732 |
| ಸದಸ್ಯರ ಹೆಸರು | ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 28/03/2022. |
| ಉತ್ತರಿಸುವ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಸಖರಾಯಪಟ್ಟಣ, ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರು ಇತ್ತೀಚೆಗೆ ನಡೆದ ಆನ್‌ಲೈನ್ ವರ್ಗಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆಯ ವೈಟೇಜ್ 91 ಮೆರಿಟ್ಟಿದ್ದರೂ ಸಹ ಅಪೇಕ್ಷಿತ ಸ್ಥಳ ಖಾಲಿ ಇದ್ದಾಗ್ಯೂ, ಅಪೇಕ್ಷಿತ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡದೇ ಆನ್‌ಲೈನ್ ಪ್ರಕ್ರಿಯೆಯಲ್ಲಿ ಮರೆಮಾಚಿರುವುದಕ್ಕೆ ಕಾರಣಗಳೇನು;(ವಿವರ ನೀಡುವುದು) | ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಸಖರಾಯಪಟ್ಟಣ, ಕಡೂರು ತಾ, ಚಿಕ್ಕಮಗಳೂರು ಜಿಲ್ಲೆ ಇಲ್ಲಿನ ಶಿಕ್ಷಕರು ಅಂತರ್ ಘಟಕ ವಿಭಾಗದ ಹೊರಗಿನ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆಗೆ ಹಾಜರಾಗಿದ್ದು, ಸರ್ಕಾರದ ಜಂಟಿ ಕಾರ್ಯದರ್ಶಿಗಳು ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ ಸಿಆಸುಇ, ಬೆಂಗಳೂರು ರವರ ಪ.ಸಂ.ಸಿಆಸುಇ 78/ ಹೈಕಕೋ 2014 ದಿನಾಂಕ:22.05.2015 ರಂತೆ ರಾಜ್ಯದ ರಾಜಧಾನಿಯ ಪ್ರದೇಶದ ವಿಸ್ತಾರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತ ಕಛೇರಿ/ಸಂಸ್ಥೆಗಳಲ್ಲಿ 8% ರಂತೆ ರಾಜ್ಯ ಮಟ್ಟದ ಮೀಸಲಾತಿ ನೀಡಿದ್ದು, ಅದರಂತೆ ಬೆಂಗಳೂರು, ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಬರುವ ಖಾಲಿ |

<table>
<tr><td></td><td></td><td>ಹುದ್ದೆಗಳನ್ನು 371 ಜೆ ಗೆ ಮೀಸಲಿರಿಸಬೇಕಾಗಿದೆ. ಮೀಸಲಿರಿಸಬೇಕಾದ ಖಾಲಿ ಹುದ್ದೆಗಳನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಒಟ್ಟಾರೆ ಆ ವೃಂದದ ಮೀಸಲಿರಿಸಬೇಕಾದ ಹುದ್ದೆಗಳ ಸಂಖ್ಯೆಯ ಆಧಾರದಲ್ಲಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿಕೊಂಡು ಕನಿಷ್ಟ ಹುದ್ದೆ ಸಂಖ್ಯೆ ತಲುಪಿದ ನಂತರದ ಖಾಲಿ ಹುದ್ದೆಗಳನ್ನು ಮೀಸಲಿರಿಸಲಾಗಿದೆ. (ಅನುಬಂಧ-1)<br><br>ಸದರಿ ಜಿಲ್ಲೆಯಲ್ಲಿ ಆ ವೃಂದದ ಶಿಕ್ಷಕರು ವರ್ಗಾವಣೆಯಾದ ನಂತರ ಬರುವ ಅಭ್ಯರ್ಥಿಗಳಿಗೆ ಖಾಲಿಯಾದ ಹುದ್ದೆಗಳ ಜೊತೆಗೆ ಮೀಸಲಿರಿಸಿರುವ ಎಲ್ಲಾ ಖಾಲಿ ಹುದ್ದೆಗಳು ಸಹ ಕೌನ್ಸಿಲಿಂಗ್ ಪ್ರಕ್ರಿಯೆಗೆ ತೆರೆದುಕೊಳ್ಳುತ್ತವೆ. ಈ ಪೈಕಿ ಯಾವುದಾದರೂ ಒಂದು ಆಯ್ಕೆಯಾದಲ್ಲಿ ಉಳಿಕೆ ಹುದ್ದೆಗಳು ತಾನಾಗಿಯೇ ಮೀಸಲಾಗುವುದರಿಂದ ಸದರಿ ಖಾಲಿ ಹುದ್ದೆಗಳನ್ನು ಹೊರತುಪಡಿಸಿ ಬೇರೆ ತಾಲ್ಲೂಕಿನ /ಜಿಲ್ಲೆಯಲ್ಲಿ ಖಾಲಿ ಹುದ್ದೆಗಳು ಲಭ್ಯವಿದ್ದು, ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದರೂ ಸಹ ಸದರಿ ಶಾಲೆಯ ಶಿಕ್ಷಕರು ದಿ: 24/01/2022 ರಲ್ಲಿ ಸ್ವ ಇಚ್ಛೆಯಿಂದ ನಿರಾಕರಿಸಿರುತ್ತಾರೆ.(ಅನುಬಂಧ-2)</td></tr>
<tr><td>ಆ)</td><td>ಕೌನ್ಸಿಲಿಂಗ್ ಪ್ರಕಿಯೆ ದಿನಾಂಕ:24.01.2022 ರಿಂದ ಪ್ರಾರಂಭಗೊಂಡ ದಿನ, ದಿನಾಂಕ:03.02.2022ರ ಮುಕ್ತಾಯಗೊಳ್ಳುವವರೆಗೆ ಎಷ್ಟು ಅರ್ಜಿದಾರರು ಪ್ರತಿದಿನ ಕೌನ್ಸಲಿಂಗ್ ಪ್ರಕ್ರಿಯೆಗೆ ಹಾಜರಾಗಿ ಯಾವ ಯಾವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ; ಉಳಿದ ಖಾಲಿ</td><td>ಪ್ರೌಢ ಶಾಲಾ ಸಹ ಶಿಕ್ಷಕರು<br><table><tr><th>ಕ್ರ.ಸಂ.</th><th>ದಿನಾಂಕ</th><th>ಅರ್ಜಿದಾರರ ಸಂಖ್ಯೆ</th></tr><tr><td>01</td><td>24.01.2022</td><td>150</td></tr><tr><td>02</td><td>25.01.2022</td><td>150</td></tr><tr><td>03</td><td>27.01.2022</td><td>200</td></tr></table></td></tr>
</table>

<table>
<tr>
<td></td>
<td>ಸ್ಥಳಗಳಾವುವು ಜಿಲ್ಲಾವಾರು/ವಿಷಯವಾರು ಮಾಹಿತಿ ಒದಗಿಸುವುದು?</td>
<td>
<table>
<tr><td>04</td><td>28.01.2022</td><td>200</td></tr>
<tr><td>05</td><td>31.01.2022</td><td>200</td></tr>
<tr><td>06</td><td>01.02.2022</td><td>267</td></tr>
<tr><td>07</td><td>02.02.2022</td><td>324</td></tr>
<tr><td>08</td><td>03.02.2022</td><td>12</td></tr>
</table>
ಕೌನ್ಸಿಲಿಂಗ್‌ಗೆ ಹಾಜರಾಗಿ ಒಟ್ಟು 564(ಕೋರಿಕೆ)+26 (ಪರಸ್ಪರ) ಶಿಕ್ಷಕರು ಸ್ಥಳ ಆಯ್ಕೆ ಮಾಡಿಕೊಂಡಿರುವ ಶಿಕ್ಷಕರ ತಃಖ್ತೆ ಹಾಗೂ ಉಳಿದ ಖಾಲಿ ಹುದ್ದೆಗಳ ಮಾಹಿತಿಯನ್ನು (371 ಜಿ ಗೆ ಮೀಸಲಾಗಿರುವ ಖಾಲಿ ಹುದ್ದೆಗಳನ್ನು ಒಳಗೊಂಡಂತೆ) ಲಗತ್ತಿಸಿದೆ.(ಅನುಬಂಧ-3)
</td>
</tr>
<tr>
<td>ಇ)</td>
<td>ವಿವಿಧ ಮೀಸಲಾತಿ ನಿಯಮಾವಳಿಗಳನ್ವಯ ಕೆಲವು ಸ್ಥಳಗಳನ್ನು ಮೀಸಲಿರಿಸಿದ್ದೇ ಆದ್ದಲ್ಲಿ ಯಾವ ಕಾರಣಗಳಿಗಾಗಿ ಮೀಸಲಿಸಲಾಗಿದೆ.</td>
<td>ಸರ್ಕಾರದ ಜಂಟಿ ಕಾರ್ಯದರ್ಶಿಗಳು ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ ಸಿಆಸುಇ ಬೆಂಗಳೂರುರವರ ಪ.ಸಂ.ಸಿಆಸುಇ 78/ಹೈಕಕೋ 2014 ದಿನಾಂಕ:22.05.2015 ರಂತೆ ರಾಜ್ಯದ ರಾಜಧಾನಿಯ ಪ್ರದೇಶದ ವಿಸ್ತಾರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತ ಕಛೇರಿ/ಸಂಸ್ಥೆಗಳಲ್ಲಿ 8% ರಂತೆ ರಾಜ್ಯ ಮಟ್ಟದ ಮೀಸಲಾತಿ ಮಾಡಲಾಗಿದೆ.</td>
</tr>
<tr>
<td>ಈ)</td>
<td>ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ನಮೂದಿಸದೇ ಸಂಪೂರ್ಣ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಗೊಂದಲದ ಗೂಡಿನ ಸ್ವರೂಪದಲ್ಲಿ ನಡೆಸಿದ್ದು ಇದು ಕೇವಲ ಒಬ್ಬರಿಗೆ ಮಾತ್ರವಲ್ಲದೇ ಹಲವಾರು ಶಿಕ್ಷಕರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;(ವಿವರ ನೀಡುವುದು)</td>
<td>ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಹಾಜರಾಗಿರುವ ಶಿಕ್ಷಕರಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಈ ವಿಷಯವನ್ನು ಪ್ರಕಟಿಸಿದೆ. ಹಾಗೂ ಬದಲಿ ಖಾಲಿ ಹುದ್ದೆ ಲಭ್ಯವಿದ್ದಲ್ಲಿ ಆಯ್ಕೆಗೆ ಅವಕಾಶ ನೀಡಿದೆ. ಹೀಗಾಗಿ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಯಾವುದೇ ಗೊಂದಲ ಆಗಿರುವುದಿಲ್ಲ.</td>
</tr>
</table>

| | | |
|---|---|---|
| ಉ) | ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲು ಅನುಸರಿಸಲಾದ ಮಾನದಂಡಗಳೇನು?(ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮ 2021 ದಿನಾಂಕ:25.06.2021 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020 ದಿನಾಂಕ:22.07.2020 (ಅಧಿಸೂಚನೆ ಇಪಿ 08 ಇಟಿಆರ್ 2020 ದಿನಾಂಕ:22.07.2020)ರ ಅಧಿಸೂಚನೆಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗಿದೆ. |

ಸಂಖ್ಯೆ: ಇಪಿ 63 ಎಲ್‌ಬಿಪಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು